<u>ಸಾಕ್ಷಿಯನ್ನು ದಿನಾಂಕಃ-04.03.2026 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀಸವಾಲುಃ ಶ್ರೀ ಎನ್.ಸಿ.ಸಿ ಪ್ರತಿವಾದಿ 2 ರ ಪರ ವಕೀಲರಿಂದ</u>

4. ನನ್ನ ಗಂಡನ ಹೆಸರು ಬಿ. ಎಮ್. ಸಂತೋಷ್. 1 ನೇ ಪ್ರತಿವಾದಿ ಮತ್ತು ಅವರ ಗಂಡ ಮನೋಹರ್ ರವರ ಕೊನೆಯ ಮಗ. ನಾನು 2002 ನೇ ಸಾಲಿನಲ್ಲಿ ಮದುವೆಯಾಗಿರುತ್ತೇನೆ. ನನ್ನ ಗಂಡ 2013 ರಲ್ಲಿ ಮರಣ ಹೊಂದಿರುತ್ತಾರೆ. ನನಗೆ ಒಬ್ಬ ಮಗನಿದ್ದಾನೆ. ಅವನ ಹೆಸರು ಪ್ರೀತಂ. ನನ್ನ ಅತ್ತೆಗೆ ವಾದಿ ಮತ್ತು 2 ನೇ ಪ್ರತಿವಾದಿಯವರೂ ಕೂಡ ಮಕ್ಕಳು ಎಂದರೆ ಸರಿ. ನಮ್ಮ ಮಾವನವರ ಕುಟುಂಬದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಿಃ21.11.2001 ರಲ್ಲಿ ನಮ್ಮ ಭಾವ, ಅತ್ತೆ ಮತ್ತು ವಾದಿ, 2 ನೇ ಪ್ರತಿವಾದಿ ಮತ್ತು ನನ್ನ ಗಂಡ ಕುಟುಂಬದ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ವಿಭಾಗ ಪತ್ರವನ್ನು ನಾನು ನೋಡಿರುತ್ತೇನೆ. ಸದರಿ ವಿಭಾಗ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಈಗಾಗಲೇ ನಿಡಿ 1 ಎಂದು ಗುರುತಿಸಲಾಗಿದೆ.

5. ನಿಡಿ 1 ರಲ್ಲಿರುವಂತಹ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಗಳಿರುವುದಿಲ್ಲ ಎಂದರೆ ಸರಿ. ನಿಡಿ 1 ರ ಪ್ರಕಾರ ನನ್ನ ಅತ್ತೆ ಮತ್ತು ಮಾವರವರಿಗೆ ಹೋಗಿರುವ ಆಸ್ತಿಗಳು ಅವರ ಸ್ವಂತ ಆಸ್ತಿಗಳು ಎಂದರೆ ಸರಿ. ನಿಡಿ 1 ರ ಪ್ರಕಾರ ನನ್ನ ಗಂಡನಿಗೆ ಬಂದಂತಹ ಆಸ್ತಿಗಳಿಗೆ ನನ್ನ ಗಂಡನೇ ಹಕ್ಕು ಮತ್ತು ವಾರಸುದಾರರು ಎಂದರೆ ಸರಿ. ಅದೇ ರೀತಿ 2 ನೇ ಪ್ರತಿವಾದಿಯು ಸಹ ಅವರ ಪಾಲಿಗೆ ಬಂದಂತಹ ಆಸ್ತಿಯ ಸಂಪೂರ್ಣ ಹಕ್ಕು ಅವರಿಗೆ ಇರುತ್ತದೆ ಎಂದರೆ ಸರಿ. ನಾನು ಮದುವೆಯಾಗುವ ಕಾಲಕ್ಕೆ ನನ್ನ ಅತ್ತೆ-ಮಾವ, ಮಕ್ಕಳು ಸೋಮವಾರಪೇಟೆ ಪವರ್ ಹೌಸ್ ರಸ್ತೆಯ ಬದಿಯಲ್ಲಿರುವ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯು ದಾವಾ ಶೆಡ್ಯೂಲ್ ಬಿ ಸ್ವತ್ತಾಗಿ ಇರುತ್ತದೆ ಎಂದರೆ ಸರಿ. ಸದರಿ ಮನೆಯಲ್ಲಿ ಕೆಳಕಟ್ಟಡ ಮತ್ತು ಮೊದಲನೇ ಅಂತಸ್ತಿನ ಕಟ್ಟಡದಲ್ಲಿ ಬೇರೆ ಬೇರೆ ಮನೆಗಳಿದ್ದವು ಎಂದರೆ ಸರಿ. ಕೆಳಕಟ್ಟಡದಲ್ಲಿ ನಮ್ಮ ಮಾವ,ಅತ್ತೆ ಮತ್ತು 2 ನೇ ಪ್ರತಿವಾದಿಯವರು ವಾಸವಾಗಿದ್ದರು. ಮೊದಲಿನ ಅಂತಸ್ತಿನಲ್ಲಿ ನಾವು ಹಾಗೂ ವಾದಿಯು ವಾಸವಾಗಿರುತ್ತೇವೆ.

6. ಆನಂತರದಲ್ಲಿ ನಮಗೆ ಬೇರೆ ವಾಸಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ನಮ್ಮ ಮಾವ ಕರ್ಕಳ್ಳಿಯಲ್ಲಿ ಒಂದು ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರವು ನಿಡಿ 10 ಆಗಿರುತ್ತದೆ. ನಂತರ ನನ್ನ ಗಂಡ 2011 ರಲ್ಲಿ ಸದರಿ ಜಾಗದಲ್ಲಿ ಒಂದು ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿ. ನಂತರ ನನ್ನ ಗಂಡ ನಿಡಿ 11 ರಂತೆ ಪರವಾನಿಗೆಯನ್ನು ಪಡೆದು ಮನೆಯನ್ನು

ಕಟ್ಟಿರುತ್ತಾರೆ ಎಂದರೆ ಸರಿ. ಆಗ ನಾನು ನನ್ನ ಗಂಡ ಅಲ್ಲಿಯೇ ವಾಸವಾಗಿದ್ದೆವು ಎಂದರೆ ಸರಿ. ಈ ದಾವೆಯನ್ನು ಹೂಡುವವರೆಗೂ ಸೋಮವಾರಪೇಟೆಯ ಪವರ್ ಹೌಸ್ ರಸ್ತೆಯ ಕೆಳ ಅಂತಸ್ತಿನಲ್ಲಿ 1 ಮತ್ತು 2 ನೇ ಪ್ರತಿವಾದಿಗಳು ಮತ್ತು ಮೊದಲನೆ ಮಹಡಿಯಲ್ಲಿ ವಾದಿ ವಾಸವಾಗಿರುತ್ತಾರೆ ಎಂದರೆ ಸರಿ. ಆ ಮನೆಯನ್ನು ದಿಃ01.10.2021 ರಲ್ಲಿ ನಾನು ಮತ್ತು ನನ್ನ ಮಗ, ಅತ್ತೆ, 1 ಮತ್ತು 2 ನೇ ಪ್ರತಿವಾದಿ, 2 ನೇ ಪ್ರತಿವಾದಿಯ ಹೆಂಡತಿ-ಮಕ್ಕಳು ಸೇರಿ ನಮ್ಮ ಪಾಲಿನ ಹಕ್ಕನ್ನು ಒಟ್ಟಾಗಿ ದಾವಾ ಬಿ ಶೆಡ್ಯೂಲ್ ಸ್ವತ್ತನ್ನು ವಾದಿಯವರಿಗೆ ರೂ. 60 ಲಕ್ಷ ಕ್ಕೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಕ್ರಯ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಯಾವುದೇ ತಕರಾರುಇಲ್ಲ ಎಂದು ಹೇಳಿರುತ್ತಾರೆ. ಸದರಿ ಕ್ರಯ ಪತ್ರದ ಗಣಿಕೀಕೃತ ನಕಲನ್ನು ನಿಡಿ-19 ಎಂದು ಗುರುತಿಸಲಾಯಿತು.

7. ನನ್ನ ಮಾವ 2013 ರಲ್ಲಿ ತೀರಿಕೊಂಡಿರುತ್ತಾರೆ. ವಿಭಾಗ ಪತ್ರದ ನಿಡಿ 1 ರ ಪ್ರಕಾರ ನನ್ನ ಅತ್ತೆಗೆ ಹೋಗಿರುವಂತಹ ದಾವಾ ಶೆಡ್ಯೂಲ್ ಎ ಸ್ವತ್ತಿನ ಪೈಕಿ ಮಸಗೋಡು ಗ್ರಾಮದ ಸರ್ವೆ ನಂಃ 161/2 ರ 2.30 ಎಕರೆ ಜಾಗವನ್ನು ನಾನು ದಾನವಾಗಿ ಪಡೆದಿರುತ್ತೇನೆ ಎಂದರೆ ಸರಿ. ಸದರಿ ದಾನ ಪತ್ರ ಪಡೆಯುವಾಗ ನನ್ನ ಅತ್ತೆ ಸದರಿ ಸ್ವತ್ತಿನ ಸಂಪೂರ್ಣ ಹಕ್ಕುದಾರಳಾಗಿರುತ್ತಾರೆ ಎಂದು ಪಡೆದಿರುತ್ತೇನೆ ಎಂದರೆ ಸರಿ.ದಿಃ23.12.2015 ರಲ್ಲಿ ನನ್ನ ಅತ್ತೆಯು ಒಂದು ವಿಲ್ಲನ್ನು ಸಹ ಮಾಡಿರುತ್ತಾರೆ ಎಂದರೆ ಸರಿ. ಈ ವಿಲ್ ಪ್ರಕಾರ ವಿಭಾಗ ಪತ್ರದಲ್ಲಿ ನಿಡಿ 1 ರಲ್ಲಿ ಬಂದಿರುವಂತಹ ಅತ್ತೆಗೆ ಹೋಗಿರುವಂತಹ ಸ್ವತ್ತುಗಳು ಸಂಪೂರ್ಣವಾಗಿ 2 ನೇ ಪ್ರತಿವಾದಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿ. ದಿಃ23.12.2015 ರಲ್ಲಿ ನನ್ನ ಅತ್ತೆ 2 ನೇ ಪ್ರತಿವಾದಿಗೆ ಮಾಡಿರುವಂತಹ ವಿಲ್ ನ ಮಾಹಿತಿಯು ನನಗೆ ನನ್ನ ಅತ್ತೆ ತೀರಿಕೊಂಡ ನಂತರ ತಿಳಿದಿರುತ್ತದೆ. ನನ್ನ ಅತ್ತೆ ತೀರಿಕೊಂಡು ಸುಮಾರು 1 ವರ್ಷದ ನಂತರ ನನಗೆ ಮಾಹಿತಿ ವಿಲ್ಲಿನ ಮಾಹಿತಿ ಗೊತ್ತಾಗಿರುತ್ತದೆ. ನನಗೆ ವಿಲ್ ನಲ್ಲಿ ನಮೂದಿಸಿರುವ ಆಸ್ತಿಗಳ ಪೈಕಿ 1 ಆಸ್ತಿಯನ್ನು ನನಗೆ ದಾನವಾಗಿ ನೀಡಿರುತ್ತಾರೆ.

8. ನಿಡಿ 17 ದಾನ ಪತ್ರ ಆದ ನಂತರವೂ ನನ್ನ ಅತ್ತೆಯು ಆರೋಗ್ಯವಂತರಾಗಿ ಮತ್ತು ಬುದ್ದಿವಂತರಾಗಿರುತ್ತಾರೆ ಎಂದರೆ ಸರಿ. ನನ್ನ ಅತ್ತೆಯವರ ಮರಣದ ನಂತರ ನನಗೆ ದಾನವಾಗಿ ಕೊಟ್ಟ ಆಸ್ತಿ ಬಿಟ್ಟು ಉಳಿದ ಎಲ್ಲಾ ಆಸ್ತಿಗಳಿಗೂ ವಿಲ್ ಪ್ರಕಾರ 2 ನೇ ಪ್ರತಿವಾದಿಯೇ ಹಕ್ಕುದಾರರಾಗಿರುತ್ತಾರೆ ಎಂದರೆ ಸರಿ.

ಮುಂದುವರಿದ ಪಾಟೀ ಸವಾಲಿಗೆ ವಕೀಲರ ಕೋರಿಕೆಯ ಮೇರೆಗೆ ಕಾಲಾವಾಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ.ಕೇ.ಸರಿ ಇದೆ.

ಸಹಿ/-

ಸಿ.ಜೆ ಮತ್ತು ಜೆಎಂ.ಎಫ್ ಸಿ

ಸೋಮವಾರಪೇಟೆ